Sri M. MADIAH.—Have you prepared a list of backward class communities out of the Backward Class Community List, the communities which are not adequately represented in the Gazetted Services of the State ?

Sri Kadidal MANJAPPA.—Yes. The Public Service Commission in its report has clearly mentioned these matters.

Sri M. MADIAH.—Have you made a list of such communities which are not adequately represented in the State Service out of the Backward Class Community List ?

Sri Kadidal MANJAPPA.—I believe there is a list with the Public Service Commission.

Sri M. MADIAH.—What action has been taken by the Government ? Is it not a denial of the rights of the Backward class communities if the resolution of this Hon'ble House is not implemented ?

(*No answer.*)

Sri M. MADIAH.—May I know whether the Government are contemplating to appoint probationers to make up inadequacy of the communities which are not adequately represented ?

Sri Kadidal MANJAPPA.—That question does not arise out of this.

Sri M. MADIAH.—Sir, under Article 16, Government are empowered to take necessary action to see that the communities that are not adequately represented in the State services, are given adequate representation. What action has Government taken for the last four or five years ?

Sri Kadidal MANJAPPA.—At the stage of initial recruitment, adequate representation is being given to communities which are un-represented and communities which are not adequately represented.

Sri M. MADIAH.—What is the procedure followed by the Government with regard to these matters ?

Sri Kadidal MANJAPPA.—With regard to these matters, instructions are issued to the Public Service Commission. Whenever the Public Service Commission sends up recommendations in connection with appointments to the gazetted cadre, the Government takes into account this factor of giving representation to un-represented and not adequately represented communities.

Mr. SPEAKER.—Sri Madiah may give a chance to other Hon'ble Members to put some supplementaries.

ಶ್ರೀ ಡಿ. ಆರ್. ಕರಿಗೌಡ.—1945-46ರಲ್ಲಿ ಒಕ್ಕಲಿಗರು, ಕುರುಬರು, ಲಿಂಗಾಯಿತರು, ಹರಿಜನರು ಈ ನಾಲ್ಕು ಪಂಗಡಗಳಿಗೆ ಎಷ್ಟು ಪರ್ಸೆಂಟೇಜಿತ್ತು ? 1952-53ರಲ್ಲಿ ಅದು ಎಷ್ಟು ವ್ಯತ್ಯಾಸವಾಗಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಗೆಜೆಟೆಡ್ ಹುದ್ದೆಗಳು ಈ ರೀತಿ ಇದ್ದವು :—

		ಶೇಕಡಾವಾರು ಹುದ್ದೆಗಳ ಸಂಖ್ಯೆ.	
		1945-46	1952-53
1	ಒಕ್ಕಲಿಗರು	5·5	8.53
2	ಲಿಂಗಾಯಿತರು	7·4	10·83
3	ಕುರುಬರು	·8	1·86
4	ಡಿಪ್ರೆಸ್ಡ್‌ಕ್ಲಾಸಿನವರು	.95	1.69

ಶ್ರೀ ಡಿ. ಆರ್ ಕರಿಗೌಡ.—ನಾನ್‌ಗೆಜೆಟೆಡ್ ಆಫೀಸರುಗಳಲ್ಲೂ ಆ ಶೇಕಡವಾರನ್ನು ತಿಳಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—

		ಶೇಕಡಾವಾರು ಹುದ್ದೆಗಳ ಸಂಖ್ಯೆ.	
		1945-46	1952-53
1	ಒಕ್ಕಲಿಗರು	8·08	9·75
2	ಲಿಂಗಾಯಿತರು	10·82	13·01
3	ಕುರುಬರು	1·63	1·97
4	ಡಿಪ್ರೆಸ್ಡ್‌ಕ್ಲಾಸಿನವರು	4.58	5·77

Balammanakere, Nelavanki Hobli, Srinivasapur Taluk (Restoration).

Q.—668. Sri G. NARAYANA GOWDA (Mulbagal-Srinivasapur).—

Will the Government be pleased to state :—

(*a*) whether an estimate for restoration of Balammanakere of Upparahalli, Nelavanki Hobli in Srinivasapur Taluk was prepared ;

(*b*) if so, the cost of the estimate;

(*c*) the steps they have taken in this regard ?

A.—Sri Kadidal MANJAPPA (Minister for Revenue and Public Works).—

(*a*) Yes.

(*b*) Rs. 28,000.

(*c*) Sanction to the estimate is under consideration.

ಶ್ರೀ ಜಿ. ನಾರಾಯಣಗೌಡ.—ಈ ಅಂದಾಜು ಮುಂಜೂರು ಮಾಡುವ ವಿಷಯ ಪರ್ಯಾಲೋಚನೆಯಲ್ಲಿ ದೆಯೆಂದು ಹೇಳಿದ್ದೀರಿ. ಬೇಗ ಮುಂಜೂರು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಸಹಾನುಭೂತಿಯಿಂದ ಪರಿಶೀಲಿಸುತ್ತೇವೆ.

Hirekolala Tank, Chikmagalur Hobli (Restoration).

Q.—761. Sri G. PUTTASWAMY (Chikmagalur-Mudigere—Scheduled Castes).—

Will the Government be pleased to state :—

(*a*) whether there is an estimate for the restoration of Hirekolala Tank, Chikmagalur Kasaba Hobli ; if so, the amount of estimate ;

(*b*) since how long it is pending ; the reasons for the same ;

(*c*) whether there were no repeated representations from the atchkatdars of the tank in this regard ;

(*d*) if so, since how long ;

(*e*) whether they will take immediate action to restore the tank ?

A.—Sri Kadidal MANJAPPA (Minister for Revenue and Public Works).—

(*a*) Yes, for Rs. 5,36,000.

(*b*) As several alternative schemes had to be investigated, the estimate is pending for about 1½ years.

(*c*) There were representations.

(*d*) Since 19·9.

(*e*) Action will be taken soon after the estimate, which is under scrutiny, is finalised and sanctioned.

ಶ್ರೀ ಜಿ. ಪುಟ್ಟಸ್ವಾಮಿ.—ಬೇರೆಬೇರೆ ಯೋಜನೆಗಳನ್ನು ಪರಿಶೀಲಿಸಬೇಕಾಗಿದ್ದುದರಿಂದ ಕಾಲವಿಳಂಬವಾಗಿದೆಯೆಂದು ಹೇಳಿದೆ. ಆ ಯೋಜನೆಗಳ ವಿವರವನ್ನು ಹೇಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಒಂದರಲ್ಲಿ ಸ್ಕೆಚ್ ಎಲ್ಲಿಂದ ಬರಬೇಕೆಂಬುದು, ಇನ್ನೊಂದರಲ್ಲಿ ಬ್ಯಾರೇಜ್ ಸಿಂಗ್ ರಿನರ್ವಾಯರ್ ಮಾಡಬೇಕೆಂಬ ಪ್ರಪೋಸಲ್ ಇತ್ತು. ಹೀಗಾಗಿ 1929ರಿಂದ ಈ ಕೆಲಸ ನಿಧಾನವಾಗಿದೆ. ಇದಕ್ಕೆ ಹೆಚ್ಚುಹಣ ಖರ್ಚಾಗುವುದರಿಂದ ಹಣದ ಅಭಾವವೂ ಒಂದು ಕಾರಣವಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಯೋಜನೆ ಪ್ರಪೋಸಲ್ಲಿನಲ್ಲೇ ಇದೆಯೆ ಅಥವಾ ಇದಕ್ಕೆ ಎಸ್ಟಿಮೇಟ್ ಆಗಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಎಸ್ಟಿಮೇಟಾಗಿ ನೂಪರಿಂಟೆಂಡಿಂಗ್ ಇಂಜನಿಯರ ಆಫೀಸಿನಲ್ಲಿ ಸ್ಕ್ರುಟಿನಿಯಾಗುತ್ತಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಎಸ್ಟಿಮೇಟ್ ಒಂದೇನೋ ಅಥವಾ ಎಷ್ಟು ತಯಾರಾಗಿವೆ ?

ಶ್ರೀ ಕಡಿದಾಳ್ ಮಂಜಪ್ಪ.—ಹಿಂದೆ 1929ನೆಯ ಇಸವಿಯಿಂದ ಎರ್ಡಾ ಆಗಿದ್ದುವು. ಈಚೆಗೆ ಆಗಿರುವುದು ಒಂದೇ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಕೆರೆಯನ್ನು ಬಡಾವಣೆ ಮಾಡಲು ಅಂದಾಜು ಮಾಡಿದ್ದೀರಾ ?

Sri Kadidal MANJAPPA.—I cannot tell you just at present.

ಶ್ರೀ ಜಿ. ಪುಟ್ಟಸ್ವಾಮಿ.—ಈ ಅಂದಾಜಿನ ಹಣವನ್ನು ಯಾವಯಾವುದರಿಂದ ಮೀಟ್ ಮಾಡಬೇಕೆಂದಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಎಸ್ಟಿಮೇಟ್ ಬಂದ ಮೇಲೆ ಈ ವಿಚಾರವನ್ನು ಪರ್ಯಾಲೋಚನೆಬೇಕಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ.—ಈಗ ಕೆರೆ ನಮೂಪದಲ್ಲಿರುವ ಕೆಲವು ಜಮೀನುಗಳನ್ನು ಅಕ್ವೈರ್ ಮಾಡಬೇಕೆಂದು ಅಂದಾಜು ಮಾಡಿದಿಯೆ ?

Sri Kadidal MANJAPPA.—I want notice.

Feeder Channel Work to Belagur Tank.

Q.—770. Sri G. BASAPPA (Hosadurga).—

Will the Government be pleased to state :—

(*a*) when the feeder channel work to Belagur Tank was sanctioned and commenced ;

(*b*) the outlay incurred up till now ?

A.—Sri Kadidal MANJAPPA (Minister for Revenue and Public Works).—

(*a*) The estimate was sanctioned in July 1954. Work was commenced in February 1954 pending sanction to the estimate.

(*b*) Rs. 3,025 to end of February 1955.

ಶ್ರೀ ಜಿ. ಬಸಪ್ಪ.—ಈ ಫೀಡರ್ ಛಾನಲ್ಲಿನ ಅಂದಾಜು ಬೆಲೆಯೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಸುಮಾರು 43 ಸಾವಿರ ರೂಪಾಯಿಗಳು.

ಶ್ರೀ ಜಿ. ಬಸಪ್ಪ.—1952-53ರಲ್ಲಿ ಅಭಾವ ಕಾಲದಲ್ಲಿ ಇದನ್ನು ರಿಲೀಫ್ ಕಾಂಗಾರಿಯಾಗಿ ತೆಗೆದುಕೊಳ್ಳಬೇಕೆಂದು ಆರ್ಡರಾಗಿತ್ತಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು.

ಶ್ರೀ ಜಿ. ಬಸಪ್ಪ.—ಈ ಕೆಲಸವಾಗುವುದಕ್ಕೆ ಎಷ್ಟು ವರ್ಷ ಬೇಕು ?

ಶ್ರೀ ಕಡಿದಾಳ್ ಮಂಜಪ್ಪ.—ಜಾಗ್ರತೆ ಮಾಡುತ್ತೇವೆ. ಎಸ್ಟಿಮೇಟ್ ಮುಂಜೂರಾಗುವುದಕ್ಕೆ ಮುಂಚೆ ಬಡ್ಜೆಟ್ಟಿನಲ್ಲಿ ಹಣ ಒದಗಿಸಿದ್ದುದರಿಂದ ಜಾಗ್ರತೆ